OS No. 46/2024
PW-1

(ಇಂದು ದಿಃ 18-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ವಾಟೀ ಸವಾಲು :- ಶ್ರೀ.RSB ವಕೀಲರಿಂದ :-**

ನಾನು BA ಪದವಿಧರ. ಕ್ರಯದ ವ್ಯವಹಾರ ಅನಂತಯ್ಯ ರವರ ಮೂಲಕ ಆಗಿದೆ. ನಾನು ಪ್ರತಿವಾದಿಯಿಂದ ಮೊದಲ ಒಂದು ಅಗ್ರಿಮೆಂಟ ಮಾಡಿಕೊಂಡಿದ್ದೆ ಅದನ್ನು ರದ್ದು ಪಡಿಸಿ 2ನೇ ಅಗ್ರಿಮೆಂಟ ಮಾಡಿಕೊಂಡಿದ್ದೇನೆ. ಅಗ್ರಿಮೆಂಟನಲ್ಲಿ ಕ್ರಯದ ಹಣವನ್ನು ಹೆಚ್ಚಿಗೆ ತೋರಿಸಿದ ಕಾರಣಕ್ಕೆ ರದ್ದು ಪಡಿಸಿ ಬೇರೆ ಅಗ್ರಿಮೆಂಟ ಮಾಡಿಕೊಂಡೆವು. ಮೊದಲ ಅಗ್ರಿಮೆಂಟನ್ನು ಸರ್ವೆ ನಂಬರ 56/14 ವಿಸ್ತೀರ್ಣ 30 ಗುಂಟೆ, 56/20 ವಿಸ್ತೀರ್ಣ 10 ಗುಂಟೆಗೆ ಮಾಡಿಕೊಂಡಿದ್ದೆವು. ಮೊದಲು ಅಗ್ರಿಮೆಂಟ ಮಾಡಿಕೊಂಡಾಗ ಕೂಡ 2 ಅಗ್ರಿಮೆಂಟ ಮಾಡಿಕೊಂಡಿದ್ದೆವು. ಮೊದಲ ಬಾರಿ ಅಗ್ರಿಮೆಂಟ ಮಾಡಿಕೊಂಡಾಗ ನನ್ನ ಹೆಸರಿಗೆ ಒಂದೇ ಅಗ್ರಿಮೆಂಟ ಮಾಡಿಕೊಂಡಿದ್ದೇನೆ ಎದಂರೆ ಸರಿಯಲ್ಲ. ಸರ್ವೆ ನಂಬರ 56/14 ವಿಸ್ತೀರ್ಣ 30 ಗುಂಟೆ ಮತ್ತು 56/20 ವಿಸ್ತೀರ್ಣ 10 ಗುಂಟೆಗೆ ಮಾತ್ರ ಒಂದೇ ಅಗ್ರಿಮೆಂಟನ್ನು ಮಾಡಿಕೊಂಡಿದ್ದೆ ಎಂದರೆ ಸರಿ. ಅದರಲ್ಲಿ ಪ್ರತಿವಾದಿ 61 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ಕೊಂಡಿದ್ದರು ಎಂದರೆ ಸರಿ. 61 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ದ 1 ಎಕರೆ ಜಮೀನು ಮಾತ್ರ ನನಗೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ.

ಪ್ರತಿವಾದಿ ರಂಗಾರೆಡ್ಡಿಗೆ ಒಂದು ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಅದರಲ್ಲಿ ಸರ್ವೆ ನಂಬರ 56/21 ವಿಸ್ತೀರ್ಣ 1 ಎಕರೆ 1 ಗುಂಟೆ ಮಾರಾಟ ಮಾಡಲು ಒಪ್ಪಿ ದ್ದರು ಎಂದರೆ ಸರಿ. 2ನೇ ಅಗ್ರಿಮೆಂಟನಲ್ಲಿ ಮೊದಲ ಅಗ್ರಿಮೆಂಟನಲ್ಲಿ ಸರ್ವೆ ನಂಬರ ತಪ್ಪಾಗಿದೆ ಎಂದು ಉಲ್ಲೇಖ ಮಾಡಿಲ್ಲ ಎಂದರೆ ನನಗೆ ಮೊಸ ಮಾಡಿದ್ದಾರೆ ಎಂದು ಹೇಳುತ್ತಾರೆ. ಮೊದಲನೇ ಅಗ್ರಿಮೆಂಟ ರದ್ದಾದ ನಂತರ ಅದನ್ನು ಹರಿದು ಹಾಕಿದ್ದೇವೆ. ದಿಃ 02-12-2023 ರಂದು ನನ್ನ ಪರವಾಗಿ ಮತ್ತು 02-12-2023 ರಂದು ರಂಗಾರೆಡ್ಡಿ ಪರವಾಗಿ 2 ಅಗ್ರ್ರಿಮೆಂಟ ಬರೆದುಕೊಟ್ಟಿದ್ದರು ಎಂದರೆ ಸರಿ. ದಿಃ 02-12-2023 ರಂದು ಪ್ರತಿವಾದಿ ಮಾಡಿಕೊಟ್ಟಿರು ಅಗ್ರಿಮೆಂಟ ಪ್ರಕಾರ ಇವತ್ತಿಗೂ ಖರೀದಿ ಪತ್ರ ಮಾಡಿಕೊಡಲು ಸಿದ್ದರಿದ್ದಾರೆ ಎಂದರೆ ಸದರಿ ಅಗ್ರಿಮೆಂಟ ರದ್ದಾಗಿದ್ದು, ರದ್ದಾದ ನಂತರ ಹರಿದು ಹಾಕಲಾಗಿದೆ ಎಂದು ಹೇಳುತ್ತಾರೆ. ದಿಃ 02-12-2023 ರ ಅಗ್ರಿಮೆಂಟನಲ್ಲಿ ಜಮೀನಿನ ಬೆಲೆಯನ್ನು ಹೆಚ್ಚಿಗೆ ತೋರಿಸಲಾಗಿ ಎಂದು ತಿಳಿದು ಪ್ರತಿವಾದಿಗೆ ದಿಃ 21-12-2023 ರಂದು ಚೆಕ್ ಕೊಡುವಾಗ ಆತನಿಗೆ ಗೊತ್ತಾಗದ ರೀತಿಯಲ್ಲಿ 2ನೇ ಅಗ್ರಿಮೆಂಟಗೆ ಸಹಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ದಿಃ 02-12-2023 ರ ಅಗ್ರಿಮೆಂಟನಲ್ಲಿ ಉಲ್ಲೇಖ ಇರುವ ಆಸ್ತಿಗಳಿಗೆ ಮಾತ್ರ ನಾನು ದಾವೆ ಹಾಕಬಹುದು ಹೊರತು ಬೇರೆ ಜಮೀನುಗಳಿಗೆ ಅಲ್ಲ ಎಂದರೆ ಸರಿಯಲ್ಲ. ದಿಃ 21-12-2023 ರಲ್ಲಿ ಉಲ್ಲೇಖ ಮಾಡಿರುವ

ಇನ್ನೊಂದು ಎಕರೆ ಜಮೀನಿಗೆ ಈ ದಾವೆ ಹಾಕಲು ನಾನು ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗೆ ಮೋಸ ಮಾಡಿ ಆತನಿಗೆ ಗೊತ್ತಾಗದ ರೀತಿಯಲ್ಲಿ ದಿಃ 21-12-2023ರ ಅಗ್ರಿಮೆಂಟನ್ನು ಬರೆಯಕೊಂಡಿದ್ದೇನೆ ಎಂದರೆ ಸರಿಯಲ್ಲ. 85 ಲಕ್ಷಕ್ಕೆ 2 ಜಮೀನುಗಳನ್ನು ಮಾರಾಟ ಮಾಡುತ್ತಾನೆ ಎಂದು ಹೇಳಿ ದಿಃ 21-12-2023 ರಂದು ಸುಳ್ಳು ಅಗ್ರಿಮೆಂಟ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. 63 ಲಕ್ಷಕ್ಕೆ 1 ಎಕರೆ ಮಾರಾಟ ಮಾಡಲು ಇವತ್ತಿಗೂ ಪ್ರತಿವಾದಿ ಸಿದ್ದರಿದ್ದಾರೆ ಎಂದರ ಸರಿಯಲ್ಲ. ಪ್ರತಿವಾದಿ ದಿಃ 21-12-2023 ರಂದು ಯಾವುದೇ ಅಗ್ರಿಮೆಂಟ ಬರೆದುಕೊಟ್ಟಿಲ್ಲ ಮತ್ತು 85ಲಕ್ಷಕ್ಕೆ 2 ಎಕರೆ ಮಾರಾಟ ಮಾಡಲು ಒಪ್ಪಿ ಕೊಂಡಿಲ್ಲ ಎಂದರೆ ಸರಿಯಲ್ಲ. ದಿಃ 21-12-2023 ರ ಅಗ್ರಿಮೆಂಟನಲ್ಲಿ ಮೊದಲ ಅಗ್ರಿಮೆಂಟ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಕೀಲರ ಜೊತೆ ಪ್ರತಿವಾದಿ ಶರಿಕ ಆಗಿ ಮೊದಲ ಅಗ್ರಿಮೆಂಟ ಬಗ್ಗೆ 2ನೇ ಅಗ್ರಿಮೆಂಟನಲ್ಲಿ ಉಲ್ಲೇಖ ಮಾಡಿಲ್ಲ ಎಂದು ಹೇಳುತ್ತಾರೆ. ನಾನು 1 ಎಕರೆಗೆ ಮಾತ್ರ ಖರೀದಿ ಮಾಡಿಕೊಳ್ಳಲು ಅಧಿಕಾರ ಹೊಂದಿದ್ದೇನೆ ಎಂದರೆ ಸರಿಯಲ್ಲ. 2ಎಕರೆಗೆ ಆಗಿರುವ ಅಗ್ರಿಮೆಂಟ ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿ ತೆಲಗು ಭಾಷಿಕನಾಗಿದ್ದು ಶ್ರೀಮತಿ. PRS ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಿ ಸಾಕ್ಷಿ ವಿಚಾರಣೆ ಮಾಡಲಾಯಿತು. )

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**